## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 311(331) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10.03.2025 |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಮಂಗಳೂರು ವಿಶ್ವವಿದ್ಯಾನಿಲಯ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ಇದನ್ನು ಸರಿಪಡಿಸಲು ಕೈಗೊಂಡ ಕ್ರಮವೇನು;(ವಿವರ ನೀಡುವುದು)</td><td>ಮಂಗಳೂರು ವಿಶ್ವದ್ಯಾಲಯವು ಕೆಳಕಂಡ ವೆಚ್ಚಗಳನ್ನು ನಿಯಂತ್ರಿಸುವ ಮೂಲಕ ಒಟ್ಟು ವಾರ್ಷಿಕ ವೆಚ್ಚವನ್ನು ಗಣನೀಯವಾಗಿ ಕಡಿಮೆಗೊಳಿಸುತ್ತಿದೆ.<br>1. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ/ಹೊರಗುತ್ತಿಗೆ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸಿಬ್ಬಂದಿಗಳಲ್ಲಿ ಒಟ್ಟು 142 ಸಿಬ್ಬಂದಿಗಳನ್ನು 2024ರಲ್ಲಿ ಬಿಡುಗಡೆಗೊಳಿಸಲಾಗಿದ್ದು, ವಾರ್ಷಿಕ ರೂ.5.52 ಕೋಟಿ ಮಿತವ್ಯಯ ಸಾಧಿಸಲಾಗಿರುತ್ತದೆ.<br>2. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ 271 ಅತಿಥಿ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದು, ಅವರ ಬೋಧನಾ ಅವಧಿಗಳನ್ನು ಅಗತ್ಯಕ್ಕೆ ಅನುಗುಣವಾಗಿ ಮಿತಿಗೊಳಿಸಲಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ಇದರಿಂದ ಸಾಕಷ್ಟು ಖರ್ಚು ಕಡಿಮೆ ಆಗಿರುತ್ತದೆ.<br>3. ವಿಶ್ವವಿದ್ಯಾನಿಲಯದಲ್ಲಿ ವಿದೇಶಿ ವಿದ್ಯಾರ್ಥಿಗಳಿಗಾಗಿ ಬಾಡಿಗೆ ಹಾಸ್ಟೆಲ್ ಕಟ್ಟಡ ಬಳಸಲಾಗುತ್ತಿದ್ದು, ದಿನಾಂಕ:01.04.2024 ರಿಂದ ಬಾಡಿಗೆ ಕಟ್ಟಡವನ್ನು ಬಳಸುತ್ತಿಲ್ಲ. ಇದರಿಂದಾಗಿ ವಾರ್ಷಿಕ ಅಂದಾಜು ರೂ.30.00 ಲಕ್ಷಗಳಷ್ಟು ಉಳಿತಾಯವಾಗಿದೆ.<br>4. ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿದ್ದ ಸುಮಾರು 90 ಸ್ಥಿರ ದೂರವಾಣಿ ಸಂಪರ್ಕಗಳನ್ನು BSNLಗೆ ಹಿಂದಿರುಗಿಸಿದ್ದು, ಇದರಿಂದಾಗಿ ವಾರ್ಷಿಕ ಅಂದಾಜು ರೂ.4.5 ಲಕ್ಷಗಳಷ್ಟು ವೆಚ್ಚ ಕಡಿಮೆ ಆಗಿರುತ್ತದೆ.<br>5. ಇ-ಆಫೀಸ್ ತಂತ್ರಾಂಶವನ್ನು ವಿಶ್ವವಿದ್ಯಾನಿಲಯದ ಎಲ್ಲಾ ಕಛೇರಿಗಳಲ್ಲಿ ಮತ್ತು ವಿವಿಧ ವಿಭಾಗಗಳಲ್ಲಿ ಬಳಸುತ್ತಿರುವುದರಿಂದ ಪೇಪರ್/ ಕಾರ್ಟ್ರೇಡ್ಜ್(CARTRIDGE) ಬಳಕೆ ಕಡಿಮೆ ಆಗಿದೆ.<br>6. ವಿಶ್ವವಿದ್ಯಾನಿಲಯಕ್ಕೆ ಆಗಮಿಸುವ ಅತಿಥಿಗಳಿಗೆ ಬೊಕ್ಕೆ/ಶಾಲು/ಹಾರ ನೀಡದೆ ವಿಶ್ವವಿದ್ಯಾನಿಲಯದಿಂದ ಪ್ರಕಟಿತ ಕೃತಿಗಳನ್ನು ಸ್ಮರಣಿಕೆ ರೂಪದಲ್ಲಿ ನೀಡಲಾಗುತ್ತಿದೆ.</td></tr>
</table>

| | | |
|---|---|---|
| | | 7. ಗ್ರಂಥಾಲಯ ಹೊರತುಪಡಿಸಿ, ಉಳಿದ ವಿಭಾಗಗಳಿಗೆ ವೃತ್ತ ಪತ್ರಿಕೆ ಪೂರೈಕೆ ನಿಲ್ಲಿಸಲಾಗಿದೆ.<br>8. ವಿದ್ಯುಚ್ಛಕ್ತಿ/ನೀರಿನ ಮಿತವ್ಯಯ ಸಾಧಿಸಲಾಗುತ್ತಿದೆ. |
| (ಆ) | ಈ ವಿಶ್ವವಿದ್ಯಾನಿಲಯ ನಡೆಸಲ್ಪಡುವ ಕಾಲೇಜುಗಳಿಂದ ವಿಶ್ವವಿದ್ಯಾನಿಲಯಕ್ಕೆ ಅನಾವಶ್ಯಕವಾಗಿ ಆರ್ಥಿಕ ಹೊರೆ ಆಗುತ್ತಿದ್ದು ಪ್ರಥಮ ದರ್ಜೆ ಕಾಲೇಜುಗಳನ್ನು ಸರ್ಕಾರ ನಡೆಸುವುದು ಸೂಕ್ತ ಎಂಬ ಸಲಹೆ ಇದ್ದು, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮವೇನು; | ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಹಲವು ಸರ್ಕಾರಿ ಹಾಗೂ ಘಟಕ ಕಾಲೇಜುಗಳನ್ನು ಕಾಲೇಜು ಶಿಕ್ಷಣ ಇಲಾಖೆಯ ಸುಪರ್ದಿಗೆ ಹಸ್ತಾಂತರಿಸುವ ಬಗ್ಗೆ ಮಂಗಳೂರು ವಿಶ್ವವಿದ್ಯಾಲಯದಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸರ್ಕಾರದ ಹಂತದಲ್ಲಿ ನಿಯಮಾನುಸಾರ ಪರಿಶೀಲನೆಯಲ್ಲಿರುತ್ತದೆ. |
| (ಇ) | ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ನಿರ್ಮಾಣಗೊಂಡಿರುವ ಬೆಳಪು ಸಂಶೋಧನ ಕೇಂದ್ರ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿದ್ದು ಅವ್ಯವಹಾರದ ಗೂಡಾಗಿದೆ ಎಂಬ ಸುದ್ದಿ ಹರಡುತ್ತಿದ್ದು, ಇದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; (ವಿವರ ನೀಡುವುದು) | ಮಂಗಳೂರು ವಿಶ್ವವಿದ್ಯಾನಿಲಯದ ಬೆಳಪು ಸಂಶೋಧನಾ ಕೇಂದ್ರ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ 87 ಯುಡಿಎ 2015, ದಿನಾಂಕ:11.07.2017ರನ್ವಯ ಒಟ್ಟು ರೂ.50.00 ಕೋಟಿ ಅನುದಾನ ಬಿಡುಗಡೆಗೆ ಮಂಜೂರಾತಿ ನೀಡಿದ್ದು, ಬಿಡುಗಡೆಗೊಂಡ ಮೊತ್ತ ರೂ.38.34 ಕೋಟಿಗಳಲ್ಲಿ ರೂ.30.50 ಕೋಟಿಗಳನ್ನು ಮಂಗಳೂರು ವಿಶ್ವವಿದ್ಯಾಲಯವಯ ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಪಾವತಿಸಿರುತ್ತದೆ.<br><br>ಬಾಕಿ ಮೊತ್ತ ರೂ.7.84 ಕೋಟಿಯಲ್ಲಿ ರೂ.7.50 ಕೋಟಿಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ಹಾಸ್ಟೆಲ್ ನಿರ್ಮಾಣ ಕಾಮಗಾರಿಗೆ ಪಾವತಿಸಲಾಗಿರುತ್ತದೆ. ವಿಶ್ವವಿದ್ಯಾನಿಲಯದ ತುರ್ತು ಅಗತ್ಯತೆ ಹಿನ್ನಲೆಯಲ್ಲಿ ರೂ.7.50 ಕೋಟಿಯನ್ನು ಬಳಸಿಕೊಳ್ಳಲಾಗಿದ್ದು, ಹಣ ದುರಪಯೋಗವಾಗಿರುವುದಿಲ್ಲ. ಬೇರೆ ಉದ್ದೇಶಕ್ಕೆ ನೀಡಿದ ಈ ಮೊತ್ತವನ್ನು ವಿಶ್ವವಿದ್ಯಾಲಯವು ಬೆಳಪು ಯೋಜನೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತದೆ. |
| (ಈ) | ಬೆಳಪು ಸಂಶೋಧನ ಕೇಂದ್ರವು ಇನ್ನೂ ಕಾರ್ಯನಿರ್ವಹಿಸದೇ ಇರಲು ಕಾರಣಗಳೇನು; ಇದಕ್ಕಾಗಿ ಮಾಡಿದ ಖರ್ಚು ಎಷ್ಟು; ಯಾವ ಉದ್ದೇಶಕ್ಕಾಗಿ ಈ ಕೇಂದ್ರವನ್ನು ಪ್ರಾರಂಭಿಸಲಾಗಿದೆ; ವಿಶ್ವವಿದ್ಯಾನಿಲಯದ ಮುಂದಿರುವ ಯೋಜನೆಗಳು ಯಾವುವು? (ವಿವರ ನೀಡುವುದು) | ಮಂಗಳೂರು ವಿಶ್ವವಿದ್ಯಾಲಯ ಅಧೀನದಲ್ಲಿರುವ ಉಡುಪಿ ಜಿಲ್ಲೆಯ ಬೆಳಪು ಪ್ರದೇಶದಲ್ಲಿ ಸ್ಥಾಪಿಸಲಾದ ಸಂಶೋಧನಾ ಕೇಂದ್ರ ಕಟ್ಟಡದ ನಿರ್ಮಾಣ ಕಾರ್ಯದ ಕಾಮಗಾರಿಯು ಅಂತಿಮ ಹಂತದಲ್ಲಿದ್ದು, ಸಂಶೋಧನಾ ಕೇಂದ್ರವು ಉದ್ಘಾಟನೆಯಾಗಿರುವುದಿಲ್ಲ. ಕಾಮಗಾರಿ ಮುಕ್ತಾಯಗೊಂಡ ನಂತರ ವಿಶ್ವವಿದ್ಯಾಲಯವು ಸಂಶೋಧನಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಕ್ರಮ ಕೈಗೊಳ್ಳುತ್ತದೆ. |

ಸಂಖ್ಯೆ:ಇಡಿ/07/ಯುಡಿವಿ/2025

(ಡಾ|| ಎಂ.ಸಿ ಸುಧಾಕರ್)
ಉನ್ನತ ಶಿಕ್ಷಣ ಸಚಿವರು.